ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ, ಬಾಗಲಕೋಟ-02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O & M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಪೀಠಿಕೆ:

ದಿನಾಂಕ: **28.09.2020** ರಂದು ಬೆಳಿಗ್ಗೆ **12.00** ಘಂಟೆಗೆ ಶ್ರೀ ಕಾಶಿನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀ ಬಿ ಪಿ ಹಲಗತ್ತಿ, (ಪ್ರ) ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ.
2. ಶ್ರೀ ಪಿ ಹೆಚ್ ಪೊಚಗುಂಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಗುಳೇದಗುಡ್ಡ.
3) ಶ್ರೀ ಪ್ರಶಾಂತ ಮಡ್ಡೆನ್ನವರ, ಶಾಖಾಧಿಕಾರಿ, ಬಾದಾಮಿ.
4) ದಿವಂಗತಃಯಲ್ಲಪ್ಪ ರಂಗಪ್ಪ ಬಳಿಗಾರ ಪರವಾಗಿ ಶ್ರೀಮತಿ: ಶಾರವ್ವ ಯಲ್ಲಪ್ಪ ಬಳಿಗಾರ, ರಂಗನಾಥ ನಗರ, ಬಾದಾಮಿ.

<u>**ಪ್ರಕರಣ ಸಂಖ್ಯೆ: 03/2020**</u>

ದಿವಂಗತಃಯಲ್ಲಪ್ಪ ರಂಗಪ್ಪ ಬಳಿಗಾರ ಪರವಾಗಿ
ಶ್ರೀಮತಿ: ಶಾರವ್ವ ಯಲ್ಲಪ್ಪ ಬಳಿಗಾರ, ------- ದೂರುದಾರರು.

ಪ್ರತಿನಿಧಿ:

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹುವಿಸಕಂನಿ., ------- ಪ್ರತಿವಾದಿ
ಗುಳೇದಗುಡ್ಡ.

**ವಿಷಯ:** "ಬದಾಮಿ ನಗರದ ಸ.ನಂ 113/ಹ, ಸರ್ವೇ ನಂಬರಿನಲ್ಲಿ ಒಟ್ಟು 29 ಪ್ಲಾಟಗಳಿದ್ದು, ಇದರಲ್ಲಿ ಕೆಲವು ಮನೆಗಳು ನಿರ್ಮಾಣವಾಗಿದ್ದು, ಅದರಲ್ಲಿ ಕೆಲವು ಮನೆಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಕೊಟ್ಟಿದ್ದು, ನಮಗೆ ಸುಮಾರು 8 ವರ್ಷಗಳಿಂದ ತಾತ್ಕಾಲಿಕ (Temparary) ಕನೆಕ್ಷನ್ (ಸಂಪರ್ಕ ನೀಡಿರುತ್ತಾರೆ) ಕೊಟ್ಟಿದ್ದಾರೆ. ನಾನು ಬದಾಮಿಯ ಹೆಸ್ಕಾಂ ಶಾಖಾಧಿಕಾರಿಗಳಿಗೆ ಕೇಳಿದರೆ ಈ ಲೇಔಟ್ Approval ಆಗಿಲ್ಲಾ ಎಂದು ಹೇಳುತ್ತಿದ್ದಾರೆ. ಕಾರಣ ಈ ಲೇಔಟ್ ನೀವು Approval ಮಾಡಿಕೊಂಡು ನಮಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಬೇಕಾಗಿ ವಿನಂತಿ." ಇರುವ ಕುರಿತು.

*&*&*

ಪ್ರಕರಣ ಸಂಖ್ಯೆ: 03/2020 ರಕ್ಕೆ ಸಂಬಂಧಿಸಿದಂತೆ, ದಿನಾಂಕ: 28.09.2020 ರಂದು ಬೆಳಿಗ್ಗೆ 12.00 ಘಂಟೆಗೆ ಶ್ರೀ **ಕಾಶಿನಾಥ. ಹಿರೇಮಠ**, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ ಅಧಿಕಾರಿಗಳು/ ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1) ಶ್ರೀ ಪಿ ಹೆಚ್ ಪೊಚಗುಂಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಗುಳೇದಗುಡ್ಡ ರವರ ಸಭೆಗೆ ಹಾಜರಾಗಿರುತ್ತಾರೆ ಪತ್ರ ಸಂಖ್ಯೆ:ಬ/ಶಾ.ಅ/ಹಿಸ/2020-21/952 ದಿನಾಂಕ:25/09/2020 ರ ಅನುಸಾರ ಲಿಖಿತ ಹೇಳಿಕೆ.

" ಶ್ರೀ. ದಿವಂಗತ ಯಲ್ಲಪ್ಪ ರಂಗಪ್ಪ ಬಳಿಗಾರ, ಶ್ರೀ. ರವಿಚಂದ್ರ ಪರಸಪ್ಪ ಹಡಪದ, ಶ್ರೀಮತಿ: ಮಂಜುಳಾ ತಾಯಿ ಯಲ್ಲಪ್ಪ ಜಮಖಂಡಿ ರವರು ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ಸಲ್ಲಿಸಿರುವ ದೂರಿನನ್ವಯ ತಾಲೂಕಾ ಭೂಮಾಪನಾ ಕಾರ್ಯಾಲಯ ಬದಾಮಿ ರವರಿಗೆ ನಕ್ಷೆಯ ನೈಜತೆಗೋಸ್ಕರ ಶಾಖಾ ಕಛೇರಿ ಹೆಸ್ಕಾಂ ಬದಾಮಿಯಿಂದ ದಿನಾಂಕ:18.09.2020 ರಂದು ಪತ್ರ ಬರೆಯಲಾಗಿದ್ದು, ಇದರ ಭೂಮಾಪನಾ ಇಲಾಖೆಯಿಂದ ಇದೂವರೆಗೆ ಯಾವುದೇ ಪ್ರತಿಕ್ರೀಯೆ ದೊರಕಿರುವದಿಲ್ಲ. ಆದ್ದರಿಂದ ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಗುಳೇದಗುಡ್ಡ ಕಛೇರಿಯಿಂದ ಮತ್ತೊಮ್ಮೆ ಭೂಮಾಪನಾ ಕಾರ್ಯಾಲಯ ಬದಾಮಿಗೆ ಪತ್ರ ಬರೆಯಲಾಗಿದ್ದು, ಯಾವುದೇ ಪ್ರತಿಕ್ರೀಯೆ ದೊರಕಿರುವದಿಲ್ಲ ಎಂದು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

8

ದಿವಂಗತ:ಯಲ್ಲಪ್ಪ ರಂಗಪ್ಪ ಬಳಿಗಾರ ಪರವಾಗಿ ಶ್ರೀಮತಿ: ಶಾರವ್ವ ಯಲ್ಲಪ್ಪ ಬಳಿಗಾರ, ಬಾದಾಮಿ ರವರ ಹೇಳಿಕೆ :

- ಮೇಲ್ಕಾಣಿಸಿದ ವಿಷಯದನ್ವಯ "ಬದಾಮಿ ನಗರದ ಸ.ನಂ 113/ ಹ ಸರ್ವೇ ನಂಬರಿನಲ್ಲಿ ಒಟ್ಟು 29 ಪ್ಲಾಟಗಳಿದ್ದು, ಇದರಲ್ಲಿ ಮನೆಗಳು ನಿರ್ಮಾಣವಾಗಿದ್ದು, ಆದರಲ್ಲಿ ಕೆಲವು ಮನೆಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಕೊಟ್ಟಿದ್ದು, ನಮಗೆ ಸುಮಾರು 8 ವರ್ಷಗಳಿಂದ ಎಲ್.ಟಿ-7 ಜಕಾತಿಯಲ್ಲಿ (Temparary) ಕನೆಕ್ಷನ್ (ಸಂಪರ್ಕ ನೀಡಿರುತ್ತಾರೆ) ಕೊಟ್ಟಿದ್ದಾರೆ. ನಾನು ಬದಾಮಿಯ ಹೆಸ್ಕಾಂ ಶಾಖಾಧಿಕಾರಿಗಳಿಗೆ ಕೇಳಿದರೆ ಈ ಲೇಔಟ್ Approval ಆಗಿಲ್ಲಾ ಎಂದು ಹೇಳುತ್ತಿದ್ದಾರೆ. ಕಾರಣ ಈ ಲೇಔಟ್ ನೀವು Approval ಮಾಡಿಕೊಂಡು ನಮಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಬೇಕೆಂದು ವಿನಂತಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಗುಳೇದಗುಡ್ಡ ಇವರ ಹೇಳಿಕೆ ಲೇಔಟಿನ ನಕ್ಷೆಯನ್ನು (ಬ್ಲೂ ಪ್ರಿಂಟ್) ಇದೂವರೆಗೂ ಭೂಮಾಪನಾ ಕಾರ್ಯಾಲಯ ನೀಡಿರುವದಿಲ್ಲ ಎಂದು ತಿಳಿಸಿರುತ್ತಾರೆ. ಹಾಗೂ 2009 ರಲ್ಲಿ ಕೊಟ್ಟ 30 ನಿವೇಶನಗಳ ನಕ್ಷೆಗೆ ಮಂಜೂರಾತಿ ಪಡೆಯಲು ಸಹ ಸೂಚಿಸಲಾಗಿರುತ್ತದೆ. ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಗುಳೇದಗುಡ್ಡ ಇವರಿಗೆ ತಮ್ಮ ಕಛೇರಿಯಿಂದ ಪತ್ರ ಬರೆಯಲು ಸೂಚಿಸಲಾಗಿರುತ್ತದೆ. ಮತ್ತು ಅರ್ಜಿದಾರರಿಗೆ ಭೂಮಾಪನಾ ಕಾರ್ಯಾಲಯದಿಂದ ಸದರೀ ನಿವೇಶನಗಳ ನೀಲ ನಕ್ಷೆ ಪಡೆಯಲು ಸೂಚಿಸಲಾಗಿದೆ.

ಮೇಲಿನ ಅಂಶಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

## : ಆ ದೇ ಶ :

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2019-20/10879-10884 ದಿನಾಂಕ: 5 OCT 2020

ಸದರಿ ವಾದಿ ಪ್ರತಿವಾದಿಗಳ ಹೇಳಿಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಉಪವಿಭಾಗ ಹೆಸ್ಕಾಂ, ಗುಳೇದಗುಡ್ಡ ಹಾಗೂ ಶಾಖಾಧಿಕಾರಿ ಬದಾಮಿ ಇವರಿಗೆ ತಾಲೂಕು ಭೂಮಾಪನಾ ಕಾರ್ಯಾಲಯ ಬದಾಮಿ ರವರಿಗೆ ವಿಳಾಸಿಸಿ ನಕ್ಷೆಯ ನೈಜತೆಗೋಸ್ಕರ ಪತ್ರ ಬರೆದು ಸದರೀ ಲೇಔಟ್‌ನ ದಾಖಿಲೆಗಳನ್ನು ಪಡೆದು ಸದರೀ ಲೇಔಟಿನ ಸಕ್ಷಮ ಅಧಿಕಾರಿಯಿಂದ ಮಂಜೂರಾತಿ ಪಡೆದು ಸದರೀ ಅರ್ಜಿದಾರರಿಗೆ ಖಾಯಂ ವಿದ್ಯುತ್ ಸಂಪರ್ಕ ನೀಡಲು ಆದೇಶಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಶ್ರೀಮತಿ ಸರೋಜನಿ ಜಿ. ಹಿರೇಮನಿ
ಉಪ-ಲೆಕ್ಕನಿಯಂತ್ರಣಾಧಿಕಾರಿ, ಹಾಗೂ
ಗ್ರಾ.ಕುಂ.ಕೊ.ನಿ..ವೇದಿಕೆಯ ಸದಸ್ಯರು,
ಬಾಗಲಕೋಟ

ಅಧ್ಯಕ್ಷರು,
(ಕೆ ಜಿ ಹಿರೇಮಠ,)
ಅಧೀಕ್ಷಕ ಅಭಿಯಂತರರು(ವಿ)ಬಾಗಲಕೋಟ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ.

ಪ್ರತಿಯನ್ನು:
1) ಮುಖ್ಯ ಇಂಜನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ ರವರ ಮಾಹಿತಿಗಾಗಿ. .
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಗುಳೇದಗುಡ್ಡ ರವರ ಮಾಹಿತಿಗಾಗಿ.
5) ಶಾಖಾಧಿಕಾರಿ, ಕಾ ಮತ್ತು ಪಾ ಶಾಖೆ ಹೆಸ್ಕಾಂ, ಬಾದಾಮಿ ಮಾಹಿತಿಗೆ ಸೂಕ್ತ ಕ್ರಮಕ್ಕಾಗಿ
6) ದಿವಂಗತ:ಯಲ್ಲಪ್ಪ ರಂಗಪ್ಪ ಬಳಿಗಾರ ಪರವಾಗಿ ಶ್ರೀಮತಿ: ಶಾರವ್ವ ಯಲ್ಲಪ್ಪ ಬಳಿಗಾರ, ರಂಗನಾಥ ನಗರ,ಬಾದಾಮಿ ರವರ ಮಾಹಿತಿಗಾಗಿ.

ಕಛೇರಿ ಪ್ರತಿ/ಪ್ರಧಾನ ಕಡತ.